**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**
**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003**

ಸಂಖ್ಯೆ: ಬಿ6/ಗ.ಯಂ.ನಿ–16/2011-12
ದಿನಾಂಕ: 22-03-2012

ದರಪಟ್ಟಿ ಆಹ್ವಾನ ಪ್ರಕಟಣೆ

ವಿಷಯ : 2010-11ನೇ ಸಾಲಿನಲ್ಲಿ ಮಂಡಳಿಯು ಹೊಸದಾಗಿ ಖರೀದಿಸಲಾಗಿರುವ 16-Wipro ಗಣಕಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ದರಪಟ್ಟಿ ಕರೆಯುವ ಬಗ್ಗೆ.

ಉಲ್ಲೇಖ: 1. 16-Wipro ಗಣಕಯಂತ್ರಗಳ ಖರೀದಿ ದಿನಾಂಕ: 08-04-2011, [Installation dt: 09-05-2011.

* * * * *

ಮಂಡಳಿಯಲ್ಲಿನ ಕೆಳಕಂಡ 16-Wipro ಗಣಕಯಂತ್ರಗಳನ್ನು ದಿ: 09-05-2012 ರಿಂದ ದಿ: 31-12-2012ರ ವರೆಗಿನ ಅವಧಿಗೆ ನಿರ್ವಹಣಾ ಕಾರ್ಯಕ್ಕಾಗಿ ಅರ್ಹ ಅಧೀಕೃತ ಸಂಸ್ಥೆಗಳಿಂದ ದರಪಟ್ಟಿ ಕರೆಯಲಾಗಿದೆ ಆಸಕ್ತಿ ಇದ್ದಲ್ಲಿ ತಮ್ಮ ದರಪಟ್ಟಿ ಸಲ್ಲಿಸಲು ಕೋರಿದೆ.

ಗಣಕಯಂತ್ರಗಳ configuration ವಿವರ:

| ಕ್ರ.ಸಂ | ಗಣಕಯಂತ್ರಗಳ ವಿವರ | ಗಣಕಯಂತ್ರಗಳ ಸಂಖ್ಯೆ | ಅವಧಿ |
|---|---|---|---|
| 1 | Wipro- CORE I3-550<br>processor : 3.2 GHz 4MB,<br>WIN 7 PROF 32BIT OS<br>Standard Model<br>TFT-18.5 WIDE-TFT-TCO 03 W/Spk<br>Mouse-USB 2BTN W-Scrolloptical<br>DVD Writer, SMPS ATX 250W<br>320GB SATA2 7200RPM HDD 2GB<br>DDR3 1066 Memory | 16 | ದಿ: 09-05-2012 ರಿಂದ ದಿ: 31-12-2012 ರ ವರೆಗೆ |

**ನಿಬಂಧನೆಗಳು :**

1. ಸದರಿ ನಿರ್ವಹಣೆ ಕಾರ್ಯವು ದರಪಟ್ಟಿಯಲ್ಲಿ ಸೂಚಿಸಿರುವ 16 ಗಣಕಯಂತ್ರಗಳು ಮತ್ತು ಅವುಗಳ ದುರಸ್ಥಿಯನ್ನು ಒಳಗೊಂಡಿರುತ್ತದೆ.
2. ನಿರ್ವಹಣಾ ಕಾರ್ಯಕ್ಕೆ ಅರ್ಹವಾದ ಸಂಸ್ಥೆಯು ಸದರಿ ಗಣಕ ಯಂತ್ರಗಳು ಹಾಳಾಗದಂತೆ, ಸುಸ್ಥಿತಿಯಲ್ಲಿರುವಂತೆ ಮುಂಜಾಗ್ರತಾ ಕ್ರಮವಾಗಿ ನಿರ್ವಹಣೆ ಮಾಡಬೇಕು.
3. ದಿನಾಂಕ: 09-05-2012 ರಿಂದ ದಿ: 31-12-2012 ರ ವರೆಗಿನ ಕಾಲಾವಧಿಗಾಗಿ ನಿರ್ವಹಣಾ ದರವನ್ನು ನಮೂದಿಸಬೇಕು.
4. ಸದರಿ ಗಣಕಯಂತ್ರಗಳ ನಿರ್ವಹಣಾ ಅವಧಿಯಲ್ಲಿ ಒಂದು ವೇಳೆ ದುರಸ್ಥಿಗೆ ಬಂದಲ್ಲಿ, ನಿರ್ವಹಣಾ ಸಂಸ್ಥೆಯೇ ಅದನ್ನು ಹಾಲಿ ಗಣಕಯಂತ್ರದಲ್ಲಿರುವ ಕಂಪನಿಯ ಅದಕ್ಕೆ

ಸರಿಹೊಂದುವ configuration ಅಥವಾ ಅದಕ್ಕಿಂತ ಹೆಚ್ಚಿನ ಗುಣಮಟ್ಟವುಳ್ಳ ಸಾಮಗ್ರಿಯನ್ನೇ ಬಳಸಿ ದುರಸ್ಥಿಗೊಳಿಸಬೇಕು.

5. ನಿರ್ವಹಣೆಗೆ ಒಳಪಟ್ಟಿರುವ ಗಣಕಯಂತ್ರ ದುರಸ್ಥಿಗೆ ಬಂದಲ್ಲಿ ಅದನ್ನು ದುರಸ್ಥಿಗೊಳಿಸಲು ಒಂದು ದಿನಕ್ಕಿಂತಲೂ ಅಧಿಕ ಸಮಯ ಅವಶ್ಯವಾದಲ್ಲಿ ಯಂತ್ರ ದುರಸ್ಥಿಗೊಳಿಸುವವರೆಗೂ ಅದೇ ಸಾಮರ್ಥ್ಯದ ಬದಲಿ ಗಣಕಯಂತ್ರವನ್ನು [standby computers] ಒದಗಿಸಬೇಕು.
6. ಮಂಡಳಿಯ ಪರೀಕ್ಷಾ ಕಾರ್ಯಗಳು ನಿಗದಿತ ಹಾಗೂ ಕಾಲಮಿತಿಗೆ ಒಳಪಟ್ಟಿರುವುದರಿಂದ, ಗಣಕಯಂತ್ರ ದುರಸ್ಥಿಗೆ ಬಂದಲ್ಲಿ ಆ ಕುರಿತು ಮೌಖಿಕವಾಗಿ ಅಥವಾ ದೂರವಾಣಿ ಮೂಲಕ ದೂರು ದಾಖಲಿಸಿದ 02 [ಎರಡು] ಗಂಟೆಯ ಒಳಗಾಗಿ ಮಂಡಳಿಗೆ ಹಾಜರಾಗಿ ದುರಸ್ಥಿಗೆ ಕ್ರಮವಹಿಸಬೇಕಲ್ಲದೇ, ಅವಶ್ಯವಿದ್ದಾಗ ಕಛೇರಿಕೆಲಸದ ನಂತರ ಹಾಗೂ ರಜಾ ದಿನಗಳಲ್ಲೂ ಸೇವೆ ಒದಗಿಸಬೇಕು.
7. ಗಣಕಯಂತ್ರ ದುರಸ್ಥಿಗೆ ಬಂದಲ್ಲಿ ಮೇಲೆ ಕ್ರಮಸಂಖ್ಯೆ-6 ರಲ್ಲಿ ತಿಳಿಸಿರುವಂತೆ ಕ್ರಮವಹಿಸಬೇಕು. ಒಂದು ವೇಳೆ ದೂರು ದಾಖಲಿಸಿದ ನಂತರ ಎರಡು ದಿಗಳಿಗಿಂತಲೂ ಅಧಿಕಕಾಲ ದುರಸ್ಥಿ ಮಾಡದೇ ಇದ್ದಲ್ಲಿ ದಿನವೊಂದಕ್ಕೆ ರೂ, 500/- ರಂತೆ ದಂಡ ವಿಧಿಸಲಾಗುವುದು.
8. ಆಯ್ಕೆಯಾದ ಸಂಸ್ಥೆಯು ಯಂತ್ರಗಳ ಮುಂಜಾಗ್ರತಾ ನಿರ್ವಹಣಾ ಕ್ರಮದೊಂದಿಗೆ, ಸದರಿ ದರಪಟ್ಟಿಗೆ ಲಗತ್ತಿಸಿರುವ ಅನುಬಂಧ-1 ರಂತೆ ಯಂತ್ರಗಳ ಸ್ಥಿತಿಗತಿಯ ಕುರಿತು ನಿರ್ವಹಣಾ ತಂತ್ರಜ್ಞರ ಸಹಿ ಮತ್ತು ಸಂಸ್ಥೆಯ ಮೊಹರನ್ನು ಒಳಗೊಂಡ ಅನುಮೋದನೆಯೊಂದಿಗೆ ಮಾಸಿಕ ವರದಿ ನೀಡಬೇಕು.
9. ನಿರ್ವಹಣಾ ಕಾರ್ಯಕ್ಕೆ ಆಯ್ಕೆಯಾದ ಸಂಸ್ಥೆಯು, ಪ್ರತಿ ತಿಂಗಳು ಹಾಗೂ ಅಗತ್ಯವಿದ್ದಾಗಲೆಲ್ಲಾ ಮಂಡಳಿ ಒದಗಿಸುವ Antivirus software upload ಮಾಡಬೇಕು.
10. ನಿರ್ವಹಣಾ ಬಾಬ್ತು ಮೊತ್ತವನ್ನು ತೃಪ್ತಿಕರ ನಿರ್ವಹಣಾ ಸೇವೆಯನ್ನು ಆದರಿಸಿ 04 ತಿಂಗಳಿಗೆ ಒಮ್ಮೆಯಂತೆ ಎರಡು ಕಂತುಗಳಲ್ಲಿ ಚೆಕ್ ರೂಪದಲ್ಲಿ ಪಾವತಿಸಲಾಗುವುದಲ್ಲದೆ, ಅನ್ವಯಿಸುವ ಆದಾಯ ತೆರಿಗೆಯನ್ನು ಕಟಾಯಿಸಿ, ಕಟಾವಣೆಯ ಮೊತ್ತಕ್ಕೆ ನಮೂನೆ-16 (A) ನೀಡಲಾಗುವುದು.
11. ಆಯ್ಕೆಯಾದ ಸಂಸ್ಥೆಯು ರೂ, 200/-ಗಳ ಛಾಪಾ ಕಾಗದದಲ್ಲಿ ಮಂಡಳಿಯೊಂದಿಗೆ ಈ ಕುರಿತಂತೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.
12. ಆಯ್ಕೆಯಾದ ಸಂಸ್ಥೆಯು `, 5,000/-ಗಳನ್ನು ಭದ್ರತಾ ಠೇವಣಿಯಾಗಿ ಮಂಡಳಿಗೆ ಸಲ್ಲಿಸಬೇಕು. ಭದ್ರತಾ ಠೇವಣಿ ಯನ್ನು "ನಿರ್ದೇಶಕರು, ಪರೀಕ್ಷೆಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು. ಹೆಸರಿಗೆ ಪಡೆದ ಬ್ಯಾಂಕ್ ಹುಂಡಿ ರೂಪದಲ್ಲಿ ಮಂಡಳಿಗೆ ಕರಾರು ಒಪ್ಪಂದದೊಂದಿಗೆ ಸಲ್ಲಿಸಬೇಕು. ಸದರಿ ಭದ್ರತಾ ಠೇವಣಿ ಮೊತ್ತಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ.
13. ನಿರ್ವಹಣಾ ಅವಧಿಯಲ್ಲಿ ಯಾವುದೇ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ಪರಿಮಿತಿಯು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸಂಸ್ಥೆಯವರೇ ತಮ್ಮ ಸ್ವಂತ ವೆಚ್ಚದಿಂದ ಪ್ರಕರಣ ಬಗೆಹರಿಸಿಕೊಳ್ಳಬೇಕು ಮತ್ತು ನ್ಯಾಯಾಲಯದ ಪರಿಮಿತಿಯು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿರುತ್ತದೆ.
14. ಸದರಿ ಗಣಕಯಂತ್ರ ನಿರ್ವಹಣಾ ಕರಾರಿಗೆ ಸಬಂಧಿಸಿದಂತೆ ಯಾವುದೇ ಬದಲಾವಣೆ, ತಿದ್ದುಪಡಿ, ನಿರ್ಧಾರದ ಅಧಿಕಾರವನ್ನು ನಿರ್ದೇಶಕರು,ಪರೀಕ್ಷೆಗಳು ರವರು ಹೊಂದಿರುತ್ತಾರೆ.

ಮಂಡಳಿಯಿಂದ ನೀಡಲಾಗಿರುವ ದರಪಟ್ಟಿಯ ಅನುಬಂಧದಲ್ಲಿಯೇ ದರಗಳನ್ನು ನಮೂದಿಸಿ, ಸೀಲುಮಾಡಿ ಲಕೋಟೆಯ ಮೇಲೆ "ಗಣಕಯಂತ್ರಗಳ ನಿರ್ವಹಣೆಗಾಗಿ ದರಪಟ್ಟಿ" ಎಂದು ನಮೂದಿಸಿ

ದಿನಾಂಕ: **10-04-2012** ರ ಒಳಗಾಗಿ ಹಿರಿಯ ಸಹಾಯಕ ನಿರ್ದೇಶಕರು, ಬಿ–ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಇವರಿಗೆ ಖುದ್ದಾಗಿ ಸಲ್ಲಿಸಬೇಕು.

ನಿರ್ದೇಶಕರು, ಪರೀಕ್ಷೆಗಳು

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ**

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003**

**ಅನುಬಂಧ**

**ದರಪಟ್ಟಿ**

ಕೆಳಕಂಡ ಗಣಕಯಂತ್ರಗಳ ದುರಸ್ಥಿ ಒಳಗೊಂಡಂತೆ ನಿರ್ವಹಣೆ ಕಾರ್ಯಕ್ಕಾಗಿ ದರಪಟ್ಟಿ

| ಕ್ರ.ಸಂ | ಗಣಕಯಂತ್ರಗಳ ವಿವರ | ಗಣಕಯಂತ್ರಗಳ ಸಂಖ್ಯೆ | ಅವಧಿ | ದರ [ಎಲ್ಲಾ ತೆರಿಗೆಗಳು ಒಳಗೊಂಡಂತೆ ದರ] |
|---|---|---|---|---|
| 1 | Wipro- CORE I3-550<br>processor : 3.2 GHz 4MB,<br>WIN 7 PROF 32BIT OS<br>Standard Model<br>TFT-18.5 WIDE-TFT-TCO 03 W/Spk<br>Mouse-USB 2BTN W-Scrolloptical<br>DVD Writer, SMPS ATX 250W<br>320GB SATA2 7200RPM HDD 2GB<br>DDR3 1066 Memory | 16 | ದಿ: 09-05-2012 ರಿಂದ ದಿ: 31-12-2012 ರ ವರೆಗೆ | |

ಸಂಸ್ಥೆಯ ಮಾಲೀಕರ ಸಹಿ ಮತ್ತು ಮೊಹರು